ದೊಡ್ಡ ಬಿಳಿಯ ಕುದುರೆ ಹೂಡಿದ ಸಿಂಹಾಸನ ಸೀಟಿನ ಸಾರೋಟು ಕಾದು ನಿಂತಿತ್ತು. ಅದು ಜನಸಂದಣಿ ತುಂಬಿದ ಬಜಾರು ರಸ್ತೆಯಲ್ಲಿ ಹಾದುಹೋಗುವುದು ಎಂದು ಗೊತ್ತಾಗಿ, 'ನಾನು ನಡೆದೇ ಬರುತ್ತೇನೆ' ಎಂದೆ. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ, 'ದಯವಿಟ್ಟು ಪರಂಪರೆ ತಪ್ಪಿಸಬೇಡಿ. ತಾಯಿ ಭುವನೇಶ್ವರಿಗೆ ಅವಮಾನ ಮಾಡಿದಂತೆ' ಎಂದನು. ನನ್ನ ಬಾಯಿ ಕಟ್ಟಿತು. ಪ್ರಿನ್ಸಿಪಾಲೆಯ ಜತೆ ಸಾರೋಟಿನಲ್ಲಿ ಕುಳಿತು ಹೊರಟರೆ ಪೇಟೆಗೆ ಬಂದಿದ್ದ ಹಳ್ಳಿಗರು, 'ಇದೇನು ಬಂತು ಈ ಮಧ್ಯವಯಸ್ಕ ದಂಪತಿಗೆ, ಈ ರಣಬಿಸಲಲ್ಲಿ ಮೆರವಣಿಗೆ ತೆಗೆಸಿಕೊಳ್ಳಲು' ಎಂಬಂತೆ ಬೆರಗಾಗಿ ನೋಡುತ್ತಿದ್ದರು. ಶಾಲಾಬಸ್ಸಿನಲ್ಲಿದ್ದ ಮಕ್ಕಳು ಹಾಯ್ ಅಂಕಲ್, ನಮಸ್ತೆ ಆಂಟಿ ಎಂದು ವಿಶ್ ಮಾಡಿದವು. ಪರಿಚಿತರ್‍ಯಾರೂ ಈ ರಸ್ತೆಗೆ ಬಾರದಿರಲಿ ದೇವರೇ ಎಂದು ಬೇಡುತ್ತ ಕಣ್ಮುಚ್ಚಿ ಕುಳಿತೆ. ಮುಜುಗರದಲ್ಲಿ ಗಮನಿಸದೇ ಇದ್ದ ಒಂದು ಸಂಗತಿ ಗಮನಕ್ಕೆ ಬಂತು ಅದು ವಾದ್ಯದ ಶೋಕಭರಿತ ಲಯ. ಪ್ರಿನ್ಸಿಪಾಲರಿಗೆ ಕೇಳಿದೆ: 'ವಾದ್ಯದವರನ್ನು ಎಲ್ಲಿಂದ ಕರೆಸಿದಿರಿ?' 'ಗೊತ್ತಿಲ್ಲ. ಲಗ್ನದ ಸೀಜನ್ ಇರುವುದರಿಂದ ವಾದ್ಯದವರು ಸಿಗದೆ ಎಲ್ಲಿಂದಲೊ ಪಾಪ ವಿದ್ಯಾರ್ಥಿಗಳು ಕಷ್ಟಪಟ್ಟು ಹುಡುಕಿ ತಂದಿದ್ದಾರೆ. ಯಾಕೆ ಚೆನ್ನಾಗಿ ಬಾರಿಸ್ತಿಲ್ಲವಾ?' ಎಂದರು. 'ಚೆನ್ನಾಗೇನೊ ಬಾರಿಸ್ತಿದಾರೆ. ಆದರೆ ಇದು ಅಂತಿಮ ಪಯಣಕ್ಕೆ ನುಡಿಸುವ ಸಂಗೀತ. ಈ ತಮಟೆ, ಈ ವಾಲಗ ತಮಿಳರು ಶವಯಾತ್ರೆಗೆ ಬಳಸುವಂತಹದು. ಒಂದೇ ಉಪಕಾರ. ಈ ಸಾರೋಟಿನ ಫೋಟೊ ನಾಳೆ ಪತ್ರಿಕೆಯಲ್ಲಿ ಬರದಂತೆ ನೋಡಿಕೊಳ್ಳಿ' ಎಂದೆ. 'ಅಯ್ಯೊ, ನಮಗೆ ಗೊತ್ತೇ ಆಗಲಿಲ್ಲ ನೋಡಿ. ನಮ್ಮ ಮನೆಯವರು ಊರಲ್ಲಿಲ್ಲ. ಗೊತ್ತಾದರೆ ಏನಂತಾರೊ ಏನೊ' ಎಂದು ಆಕೆ ಪೇಚಾಡಿಕೊಂಡರು.

ಭಾಷಣಕಾರರ ಬದುಕಿನಲ್ಲಿ ಭಾಷಣೋತ್ತರ ಘಟನೆಗಳು ವರ್ಷವೆಲ್ಲ ಕಷ್ಟಪಟ್ಟ ರೈತರಿಗೆ ಸುಗ್ಗಿ ಕಾಲದಂತೆ. ಫಲ ಶಾಲು ಸಂಗ್ರಹಿಸುವುದು, ಪತ್ರಿಕಾ ವರದಿ ನೋಡುವುದು, ಅಭಿನಂದನ ಪತ್ರ ಓದುವುದು ಇತ್ಯಾದಿ ಅಲ್ಲಿ ಬರುತ್ತವೆ. ಕೆಲವು ಪತ್ರಿಕೆಗಳೊ ವಿಚಿತ್ರವಾಗಿ ವರದಿ ಮಾಡುತ್ತವೆ. ಸಾಹಿತ್ಯಕ ಹಿನ್ನೆಲೆಯಿಲ್ಲದವರು ಬಂದರಂತೂ ಭಾಷಣದ ಅಡ್ಡಮಾತನ್ನೇ ಮುಖ್ಯ ಹೇಳಿಕೆ ಮಾಡುತ್ತಾರೆ. ಒಮ್ಮೆ ಕನ್ನಡ ಸಾಹಿತ್ಯದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾತಾಡಿ ಕೆಳಗಿಳಿಯುತ್ತಿದ್ದೆ. ಮುತ್ತಿಕೊಂಡ ಅಭಿಮಾನಿಗಳ ನಡುವೆ, ತನ್ನ ಹನಿಗವನಕ್ಕೆ ಓದುಗರಿಲ್ಲ ಎಂದು ಶಾನೆ ನೊಂದಿದ್ದ ಯುವಕವಿಯೊಬ್ಬ, 'ಕೆಲವರು ಮಹಾಕಾವ್ಯ ಬರೀತಿದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ?' ಎಂದು ಕೇಳಿದನು. ನಾನು ಲಘುದಾಟಿಯಲ್ಲಿ 'ಅದೊಂದು ರೋಗ ಕಂಡ್ರಿ' ಎಂದೆ. ಎಲ್ಲರೂ ನಕ್ಕರು. ಪರಿಣಾಮಕಾರಿ ಭಾಷಣ ಮಾಡಿದ ಸುಖದಲ್ಲಿ ಓಲಾಡುತ್ತ ರಾತ್ರೆಯೆಲ್ಲ ಪಯಣಿಸಿ ಮನೆಗೆ ಬಂದೆ. ಮೈತೊಳೆದುಕೊಂಡು ತಲೆ ಒರೆಸಿಕೊಳ್ಳುತ್ತ, ಸುಡುಚಹ ಕುಡಿಯುತ್ತ ಕುಳಿತಿದ್ದೆ. ಫೋನು ರಿಂಗಣಿಸಿತು. ವಯೋವೃದ್ಧ ಅರೆನಡುಕದ ದನಿ ಅತ್ತಿಂದ: 'ಸ್ವಾಮೀ, ಪತ್ರಿಕೆಯಲ್ಲಿ ತಮ್ಮ ಹೇಳಿಕೆ ಓದಿದೆ. ನಾನೇ ಆ ಮಹಾಕಾವ್ಯ ಬರೆದ ರೋಗಿ. ಇವತ್ತು ಅದರ ಮೆರವಣಿಗೆ ಇದೆ. ಅದಕ್ಕಾಗಿ ಧರ್ಮಸ್ಥಳದಿಂದ ಆನೆ ತರಿಸಿದ್ದೇನೆ. ಶ್ವಾನಗಳು ಊಳಿದರೆ ಮಹಾಕಾವ್ಯ ಪರಂಪರೆ ನಿಲ್ಲುವುದಿಲ್ಲ. ಕಾವ್ಯರಚನೆ ಮಾಡಲು ಸೋತು ವಿಮರ್ಶೆ ಬರೀತಿದೀರಿ. ದಮ್ಮಿದ್ದರೆ ಬರೆದು ತೋರಿಸಿ ಒಂದು ಕವಿತೆಯನ್ನ. ಅಷ್ಟಿಲ್ಲದೆ ಮಹಾಕವಿಗಳು ಕೇಳಿಲ್ಲ ನಾನೇರುವೆತ್ತರಕೆ ನೀನೇರಬಲ್ಲೆಯಾ? ಎಂದು. ನೀವಿದ್ದೀರಲ್ಲಾ ವಿಮರ್ಶಕರು, ಕೊಲೆಗಡುಕರು...' ರಪರಪ ಮಳೆ. ಏನೋ ಎಡವಟ್ಟಾಗಿದೆ ಎಂದು ಪತ್ರಿಕೆ ತೆರೆದು ನೋಡಿದೆ. ಗುಂಡಿಗೆ ಧಸಕ್ಕೆಂದಿತು. 'ಮಹಾಕಾವ್ಯ ಒಂದು ರೋಗ' ಎಂಬ ಟೈಟಲ್ ಅಡಿಯಲ್ಲಿ ನನ್ನ